### ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಭರವಸೆ

# 'ರೈತರಿಗೆ ಹಗಲಿನಲ್ಲಿ ವಿದ್ಯುತ್ ಕೊಡಿಸಲು ಪ್ರಯತ್ನ'

■ವಿಜಯಸಾಕ್ಷಿ ಸುದ್ದಿ, ಹುಬ್ಬಳ್ಳಿ

ವಿಧಾನ ಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿ ಕೇವಲ ಶಿಕ್ಷಕರ ಸಮಸ್ಯೆಗಳಿಗೆ ಪರಿಹಾರ ಒದಗಿಸುವ ನಾಯಕರಲ್ಲ. ರೈತರ ಸಮಸ್ಯೆಗಳಿಗೂ ಕೂಡ ತೀವ್ರವಾಗಿ ಸ್ಪಂದಿಸುವ ಗುಣ ಸಭಾಪತಿ ಹೊರಟ್ಟಿಯವರಲ್ಲಿದೆ. ಏಕೆಂದರೆ ಅವರೂ ಸಹ ಒಬ್ಬ ರೈತರೆ.

ತಮ್ಮ ಬಿಡುವಿನ ವೇಳೆಯಲ್ಲಿ ಹೊರಟ್ಟಿಯವರು ಹೆಚ್ಚಿನ ಸಮಯವನ್ನು ಕಳೆಯುವುದು ಹುಬ್ಬಳ್ಳಿಯ ತಮ್ಮ ತೋಟದಲ್ಲಿಯೆ. ಅಲ್ಲಿ ಅನೇಕ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳುವ ಮೂಲಕ ಆನಂದವನ್ನು ಪಡೆಯುತ್ತಾರೆ. ಟ್ರ್ಯಾಕ್ಟರ್ ಮೂಲಕ ಹೊಲ ಹರಗುತ್ತಾರೆ. ದನ ಕರುಗಳ ಮೈ ತೊಳೆದು ಪ್ರೀತಿಯಿಂದ ಅವುಗಳಿಗೆ ಮೇವು ಹಾಕುತ್ತಾರೆ. ತಮ್ಮ ಹೊಲದಲ್ಲಿ ಕೆಲಸ ಮಾಡುವ ಎಲ್ಲರ ಆರೋಗ್ಯ ವಿಚಾರಣೆಯ ಜೊತೆಗೆ ಅವರ ಎಲ್ಲ ಕಷ್ಟಗಳಲ್ಲಿ ಹೊರಟ್ಟಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಾರೆ. ಹೀಗಾಗಿ ಹೊರಟ್ಟಿಯವರು ಒಬ್ಬ ಅನುಭವಿ ಕೃಷಿಕನೂ ಆಗಿದ್ದಾರೆ.

ಮೊನ್ನೆ ಅವರ ತೋಟಕ್ಕೆ ಕಿತ್ತೂರು ಕರ್ನಾಟಕ ಭಾಗದ ನೂರಾರು ರೈತರು ತಮ್ಮ ಸಮಸ್ಯೆಗಳನ್ನು ಹೇಳಿಕೊಳ್ಳಲು ಹೊರಟ್ಟಿಯವರ ಬಳಿಗೆ ಬಂದಿದ್ದರು. ಅವರೆಲ್ಲರನ್ನೂ ಪ್ರೀತಿಯಿಂದ ಬರಮಾಡಿಕೊಂಡ ಸಭಾಪತಿ ಹೊರಟ್ಟಿಯವರು ಅವರ ಸಮಸ್ಯೆಗಳಿಗೆ ಕಿವಿಯಾದರು.



ರೈತರ ಮುಖ್ಯವಾದ ಸಮಸ್ಯೆ ಇದ್ದದ್ದು ವಿದ್ಯುತ್ ಸರಬರಾಜಿನಲ್ಲಿ. ಅಪರಾತ್ರಿಯಲ್ಲಿ ನಮಗೆ ತ್ರಿಫೇಸ್ ವಿದ್ಯುತ್ ಸಂಪರ್ಕ ನೀಡುತ್ತಾರೆ. ಆ ಸಮಯದಲ್ಲಿ ಹೊಲಗಳಿಗೆ, ತೋಟಗಳಿಗೆ ತೆರಳಿ ನೀರು ಹರಿಸಲು ಬಹಳಷ್ಟು ತೊಂದರೆಯಾಗುತ್ತದೆ. ಅದಲ್ಲದೆ ಹುಳ ಹುಪ್ಪಡಿಗಳ ಕಾಟ ಬೇರೆ. ಹೀಗಾಗಿ ನಮಗೆ ಬೆಳಕಿರುವಾಗಲೆ ವಿದ್ಯುತ್ ವ್ಯವಸ್ಥೆಯನ್ನು ಮಾಡಿಕೊಟ್ಟರೆ ಅನುಕೂಲ ಎಂಬುದು ಒಂದು ಸಮಸ್ಯೆ.

ಬೆಳೆ ಚೆನ್ನಾಗಿ ಬರಬೇಕೆಂದರೆ ಗುಣಮಟ್ಟದ ಬೀಜ ಮತ್ತು ಗೊಬ್ಬರಗಳ ಸರಬರಾಜು ಆಗಬೇಕು. ಅವುಗಳು ಅಷ್ಟೊಂದು ಉತ್ತಮ ಮಟ್ಟದಲ್ಲಿ ಇಲ್ಲದಿರುವುದರಿಂದ ಇಳುವರಿ ಬಹಳಷ್ಟು ಕಡಿಮೆ ಬರುತ್ತಿದೆ ಎಂದು ರೈತರು ತಮ್ಮ ಅಳಲು ತೋಡಿಕೊಂಡರು.

ರೈತರ ಸಮಸ್ಯೆಗಳನ್ನು ಸಹಾನುಭೂತಿಯಿಂದ ಆಲಿಸಿದ ಸಭಾಪತಿ ಹೊರಟ್ಟಿಯವರು ಎಲ್ಲರ ಜೀವದಂತೆ ರೈತರ ಜೀವವೂ ಅಮೂಲ್ಯವಾದುದು. ರಾತ್ರಿ ವೇಳೆಯಲ್ಲಿ ಬೆಳೆಗಳಿಗೆ ನೀರು ಹಾಯಿಸಲು ಹೋಗುವುದು ಅಷ್ಟೊಂದು ಸಮಂಜಸವಲ್ಲ. ನಿಮ್ಮ ಇಚ್ಛೆಯಂತೆ ರಾಜ್ಯದ ಎಲ್ಲ ರೈತರಿಗೆ ಹಗಲಿನ ಸಮಯದಲ್ಲಿಯೆ ವಿದ್ಯುತ್ ಸಂಪರ್ಕ ನೀಡುವಂತೆ ಕೆಪಿಟಿಸಿಎಲ್‌ನವರಿಗೆ ತಕ್ಷಣವೆ ಪತ್ರ ಬರೆಯುತ್ತೇನೆ ಮತ್ತು ಈ ಕುರಿತು ಸ್ಪಂದಿಸುವಂತೆ ನೂತನ ಇಂಧನ ಸಚಿವರಿಗೆ ಆಗ್ರಹಿಸುತ್ತೇನೆ ಎಂದರು.

ಗುಣ ಮಟ್ಟದ ಬೀಜ ಮತ್ತು ಗೊಬ್ಬರದ ಸರಬರಾಜಿಗೆ ಸಂಬಂಧಿಸಿದ ಕೃಷಿ ಅಧಿಕಾರಿಗಳಿಗೆ ಮತ್ತು ನೂತನ ಕೃಷಿ ಸಚಿವರಿಗೆ ಪತ್ರ ಬರೆದು ಆಗ್ರಹಿಸಿ ಎಲ್ಲವನ್ನೂ ನಿಮಗೆ ಅನುಕೂಲವಾಗುವಂತೆ ಮಾಡಿಕೊಡಲು ತಿಳಿಸುತ್ತೇನೆ ಎಂದರು. ಸಭಾಪತಿಯವರ ಮಾತುಗಳು ರೈತರಿಗೆ ಹಾಲು ಕುಡಿದಷ್ಟು ಸಂತಸ ನೀಡಿದವು. ಎಲ್ಲರೂ ಆನಂದದಿಂದ ಸಭಾಪತಿ ಹೊರಟ್ಟಿಯವರನ್ನು ಸನ್ಮಾನಿಸಿ ತಮ್ಮ ಕೃತಜ್ಞತೆ ತೋರಿದರು.

# ಚಿಕ್ಕೂಡ ಗ್ರಾಮದ ಶಾಲೆಗಳಿಗೆ ಭೇಟಿ ನೀಡಿದ ಬಸವರಾಜ ಹೊರಟ್ಟಿ




■ **ವಿಜಯಸಾಕ್ಷಿ ಸುದ್ದಿ, ಅಥಣಿ**

ಹಳ್ಳಿಗಳ ಪ್ರಗತಿಯಾದರೆ ದೇಶದ ಅಭಿವೃದ್ಧಿ ಸಾಧ್ಯ. ಈ ನಿಟ್ಟಿನಲ್ಲಿ ಚಿಕ್ಕೂಡ ಗ್ರಾಮ ಮೂಲ ಸೌಲಭ್ಯಗಳನ್ನು ಹೊಂದಿರುವುದರ ಜೊತೆಗೆ ಶೈಕ್ಷಣಿಕ ಕ್ಷೇತ್ರದಲ್ಲಿ ಪ್ರಗತಿ ಸಾಧಿಸಿದ್ದು ಸಂತಸ ತಂದಿದೆ ಎಂದು ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ಅವರು ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ಚಿಕ್ಕೂಡ ಗ್ರಾಮಕ್ಕೆ ಭೇಟಿ ನೀಡಿ, ಗ್ರಾಮ ಪ್ರಗತಿಪಥದತ್ತ ಸಾಗುತ್ತಿರುವುದರ ಕುರಿತು ಪ್ರಶಂಸೆ ವ್ಯಕ್ತಪಡಿಸಿದರು. ಸ್ಥಳೀಯ ಪ್ರಗತಿಪರ ರೈತ ಮುಖಂಡ ಪರಮೇಶ್ವರ ಮುಳ್ಳೂರ ಅವರ ಮನೆಗೆ ಭೇಟಿ ನೀಡಿ, ಗೌರವ ಸತ್ಕಾರ ಸ್ವೀಕರಿಸಿದರು. ನಂತರ ಸರಕಾರಿ ಪ್ರೌಢಶಾಲೆ ಹಾಗೂ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಗಳಿಗೆ ಸಂದರ್ಶನ ನೀಡಿ ಮಕ್ಕಳೊಂದಿಗೆ ಸಂವಾದ ನಡೆಸಿದರು.

ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 596 ಅಂಕಗಳೊಂದಿಗೆ ಪ್ರಥಮ ಸ್ಥಾನ ಪಡೆದ ಕು. ಕಾವೇರಿ ಮುತ್ತಪ್ಪ ಸನದಿಯನ್ನು ಸನ್ಮಾನಿಸಿ ಶುಭ ಹಾರೈಸಿದರು. ಅಥಣಿ ತಾಲೂಕಾ ದಂಡಾಧಿಕಾರಿ ಡಿ ಎಸ್ ಕಡಕಭಾವಿ, ಶಿರಸ್ತೆದಾರ ಮಹಾದೇವ ಬಿರಾದಾರ ಪಾಟೀಲ, ಕ್ಷೇತ್ರ ಶಿಕ್ಷಣಾಧಿಕಾರಿ ಬಸವರಾಜ ತಳವಾರ, ಕಂದಾಯ ನಿರೀಕ್ಷಕ ಶಿವಾನಂದ ಮೆನಸಂಗಿ, ಅಶೋಕ ಕೋಗಿಲೆ, ಭೂದಾನಿ ಎಮ್ ಬಿ ಪಾಟೀಲ, ಗುಂಡು ರಡ್ರಟ್ಟಿ, ಭೀಮಣ್ಣ ಐನಾಪೂರ, ಎಸ್‌ಡಿಎಮ್‌ಸಿ ಅಧ್ಯಕ್ಷ ಲಕ್ಷ್ಮಣ ಪಾಟೀಲ, ಶಿಕ್ಷಕರ ಸಂಘದ ಪದಾಧಿಕಾರಿಗಳು, ಸದಸ್ಯರು, ಗ್ರಾಮ ಪಂಚಾಯತ ಸದಸ್ಯರು, ತಾಲೂಕು ಹಂತದ ಅಧಿಕಾರಿಗಳು, ಶಿಕ್ಷಕರು ಉಪಸ್ಥಿತರಿದ್ದರು. ಮುಖ್ಯೋಪಾಧ್ಯಾಯ ರವೀಂದ್ರ ಪಾಟೀಲ ಸ್ವಾಗತಿಸಿದರು. ಆರ್ ಎಮ್ ಪೂಜಾರಿ ವಂದಿಸಿದರು.